ಸಂಖ್ಯೆ: ಇಡಿ/ಕೆಇಎ/ಪತ್ರಿಕಾ ಪ್ರಕಟಣೆ/ಯುಜಿ/2026 ದಿನಾಂಕ: 21-05-2026

ಪ್ರಕಟಣೆ – 2026

**ವಿಶೇಷಚೇತನ ಅಭ್ಯರ್ಥಿಗಳಿಗೆ ವೈದ್ಯಕೀಯ ತಪಾಸಣೆ** – ವೈದ್ಯಕೀಯ ತಪಾಸಣೆಗೆ ಹಾಜರಾಗಬೇಕಾದ ಅಭ್ಯರ್ಥಿಗಳ ಪಟ್ಟಿ

ಇಂಜಿನಿಯರಿಂಗ್, ಯೋಗ ಮತ್ತು ನ್ಯಾಚುರೋಪತಿ, ಪಶು ವೈದ್ಯಕೀಯ ಮತ್ತು ಪಶುಸಂಗೋಪನೆ, ಕೃಷಿ ವಿಜ್ಞಾನ ಕೋರ್ಸುಗಳು, [ಬಿ.ಎಸ್.ಸಿ (ಆನರ್ಸ್) ಕೃಷಿ, ಬಿ.ಎಸ್.ಸಿ (ಆನರ್ಸ್) (ರೇಷ್ಮೆ ಕೃಷಿ) ಮುಂತಾದ], [ಬಿ.ಎಸ್.ಸಿ (ನರ್ಸಿಂಗ್) ಬಿ.ಫಾರ್ಮ, 2ನೇ ವರ್ಷದ ಬಿ–ಫಾರ್ಮ ಮತ್ತು ಫಾರ್ಮಾ–ಡಿ, ವೈದ್ಯಕೀಯ, ದಂತ ವೈದ್ಯಕೀಯ, ಆಯುರ್ವೇದ, ಯುನಾನಿ, ಹೋಮಿಯೋಪತಿ, ಆರ್ಕಿಟೆಕ್ಚರ್, ಬಿಪಿಟಿ, ಬಿಪಿಒ, ಬಿಎಸ್‌ಸಿ ಅಲೈಡ್ ಹೆಲ್ತ್ ಸೈನ್ಸ್ ಕೋರ್ಸುಗಳಿಗೆ ವಿಕಲಚೇತನ ಕೋಟಾದ ಅಡಿಯಲ್ಲಿ ಸೀಟು ಪಡೆಯಲು **ಯುಜಿಸಿಇಟಿ-2026** ಆನ್‌ಲೈನ್ ಅರ್ಜಿಯಲ್ಲಿ ಮೀಸಲಾತಿ ಕ್ಲೇಮ್ ಮಾಡಿರುವ ಅಭ್ಯರ್ಥಿಗಳಿಗೆ ವಿಕಲತೆ ಅರ್ಹತೆಯನ್ನು ತಪಾಸಣೆ ಕುರಿತು ದಿನಾಂಕ **26-05-2026, 27-05-2026, 29-05-2026, 30-05-2026, 01-06-2026, 02-06-2026** ರಂದು ವೈದ್ಯರ ಸಮಿತಿಯಿಂದ ವೈದ್ಯಕೀಯ ತಪಾಸಣೆಯನ್ನು ನಡೆಸಲಾಗುವುದು. ***(ಸಮಯ:- ಬೆಳಿಗ್ಗೆ 10.00 ರಿಂದ – ವರದಿ ಮಾಡಿಕೊಳ್ಳುವ ಸಮಯ: ಬೆಳಿಗ್ಗೆ 9.00)***

ಅಭ್ಯರ್ಥಿಗಳು ನಿಗದಿಪಡಿಸಿರುವ **ದಿನಾಂಕಗಳಂದು ಹಾಜರಾಗುವುದಕ್ಕೆ ಪ್ರಾಧಿಕಾರದ ವೆಬ್‌ಸೈಟಿನಲ್ಲಿ** ನಿಗದಿತ **ಲಿಂಕ್** ನಲ್ಲಿ **23-05-2026** ರಿಂದ **SLOT BOOK ಮಾಡಿಕೊಂಡು, SLOT BOOK ಮಾಡಿಕೊಂಡ** ದಿನವೇ **ವೈದ್ಯಕೀಯ ತಪಾಸಣೆಗೆ ಕಡ್ಡಾಯವಾಗಿ** ಹಾಜರಾಗಬೇಕಿರುತ್ತದೆ. ವೈದ್ಯಕೀಯ ಸಮಿತಿಯು ಪರಿಶೀಲಿಸಿ ನೀಡುವ ಅರ್ಹತೆ ವಿಷಯದಲ್ಲಿ ವೈದ್ಯಕೀಯ ಸಮಿತಿಯ ನಿರ್ಧಾರವೇ ಅಂತಿಮವಾಗಿರುತ್ತದೆ.

ವೈದ್ಯಕೀಯ ಸಮಿತಿಯು ತಪಾಸಣೆ ಮಾಡುವ ವಿಳಾಸ:

1. ಆರ್ಥೋಪೆಡಿಕ್, ಇಎನ್‌ಟಿ ಮತ್ತು ಇತರೆ – ವೈದ್ಯಕೀಯ ಮಂಡಳಿ, ವಿಕ್ಟೋರಿಯ ಆಸ್ಪತ್ರೆ, ಕೋಟೆ, ಬೆಂಗಳೂರು
2. ಕಣ್ಣು (ಆಫ್ತಲ್ ಮಾಲಜಿ) – ಮಿಂಟೋ ಕಣ್ಣಿನ ಆಸ್ಪತ್ರೆ, ಕೋಟೆ, ಬೆಂಗಳೂರು

ವೈದ್ಯಕೀಯ ತಪಾಸಣೆಯಲ್ಲಿ ನಿಯಮಾನುಸಾರ ಅರ್ಹತೆ ಪಡೆಯುವ ಅಭ್ಯರ್ಥಿಗಳು ಮಾತ್ರ ಆಯಾ ಕೋರ್ಸುಗಳಿಗೆ ನಿಗದಿಪಡಿಸಲಾದ ವಿಶೇಷ ಚೇತನ ಕೋಟದ ಅಡಿಯಲ್ಲಿ ಸೀಟು ಪಡೆಯಲು ಪರಿಗಣಿಸಲಾಗುವುದು.

ವೈದ್ಯಕೀಯ ಪರೀಕ್ಷೆಗೆ ಅಭ್ಯರ್ಥಿಗಳು ಕಡ್ಡಾಯವಾಗಿ ಈ ಕೆಳಗಿನ ದಾಖಲೆಗಳನ್ನು ಸಲ್ಲಿಸಬೇಕು.

1. **SLOT BOOKING 23-05-2026 ರಿಂದ - SLOT BOOK ಮಾಡಿಕೊಂಡ** ಪ್ರತಿ
2. ಯುಜಿಸಿಇಟಿ-2026ಕ್ಕೆ ಭರ್ತಿ ಮಾಡಿ ಅಂತಿಮವಾಗಿ ಸಲ್ಲಿಸಿರುವ ಪ್ರತಿ ಮತ್ತು ಪ್ರವೇಶ ಪತ್ರ (CET-2026 and application and admit card)
3. ಯುಡಿಐಡಿ ಕಾರ್ಡ್
4. ಮಾನ್ಯತೆ ಇರುವ ಅಭ್ಯರ್ಥಿಯ ಭಾವಚಿತ್ರವುಳ್ಳ ಯಾವುದಾದರು ಒಂದು ಗುರುತಿನ ಚೀಟಿ (ಡ್ರೈವಿಂಗ್ ಲೈಸೆನ್ಸ್ / ಪಾಸ್‌ಪೋರ್ಟ್ / ಆಧಾರ್ ಕಾರ್ಡ್ / ಪಾನ್ ಕಾರ್ಡ್ / ಚುನಾವಣಾ ಗುರುತಿನ ಚೀಟಿ)
5. ಕರ್ನಾಟಕ ರಾಜ್ಯದಲ್ಲಿನ ಯಾವುದೇ ಸರ್ಕಾರಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುವ, ಸಂಬಂಧಪಟ್ಟ ವಿಶೇಷ ಚೇತನದ ಕ್ಷೇತ್ರದಲ್ಲಿ ಸಕ್ಷಮರಾದ ವೈದ್ಯರು ನೀಡಿರುವ ವೈದ್ಯಕೀಯ ಪ್ರಮಾಣಪತ್ರ
6. ಕಿವುಡುತನದ ಸಮಸ್ಯೆಯಿಂದ ಬಳಲುತ್ತಿರುವ ವಿದ್ಯಾರ್ಥಿಗಳು, ಕಡ್ಡಾಯವಾಗಿ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಮೈಸೂರು/ ನಿಮ್ಹಾನ್ಸ್, ಬೆಂಗಳೂರು/ ಮಣಿಪಾಲ್ ಆಸ್ಪತ್ರೆ/ ಸರ್ಕಾರಿ ವಾಕ್ ಮತ್ತು ಶ್ರವಣ ಸಂಸ್ಥೆ, ಲಿಂಗರಾಜಪುರಂ, ಬೆಂಗಳೂರು, ಇಲ್ಲಿಂದ ಪಡೆದ ಬಿಎಸ್‌ಇಆರ್ (ಬ್ರೈನ್ ಸ್ಟೆಮ್ ಎವೋಕ್ಡ್ ರೆಸ್ಪಾನ್ಸ್) ಇತ್ತೀಚಿನ PTA + BERA Audiometry report ಶ್ರವಣಮಾಪನ ವರದಿ.

ಕಾರ್ಯನಿರ್ವಾಹಕ ನಿರ್ದೇಶಕರು.

**18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012**
18th Cross, Sampige Road, Malleshwaram, Bengaluru - 560 012.
Phone: 080 - 23 564 583 Helpline : 080 - 23 460 460.
e-mail : keauthority-ka@nic.in Website : http://kea.kar.nic.in